ದಿನಾಂಕ 29.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಪಿ.ಕೆ.ವಿ ವಕೀಲರಿಂದ ಎದುರುದಾರರ ಪರವಾಗಿ

1. ನಾನು ಎಸ್ ಎಸ್ ಎಲ್ ಸಿ ವ್ಯಾಸಂಗ ಮಾಡಿರುತ್ತೇನೆ. ಅಪಘಾತವು ದಿನಾಂಕ 18.12.2020 ರಂದು ಆಗಿರುತ್ತದೆ. ಅಪಘಾತದ ಸಮಯದಲ್ಲಿ ನಾನು ಆನೆಗೂಳಕ್ಕೆ ಹೋಗುತ್ತಿದ್ದೆ. ಆನೆಗೂಳ ದೊಡ್ಡತಾರನಹಳ್ಳಿ ಗ್ರಾಮದ ನಡುವಿನ ರಸ್ತೆಯು ಅಪಘಾತ ನಡೆದ ಸಮಯದಲ್ಲಿ ಕಿರಿದಾಗಿತ್ತು ಎಂದರೆ ಸರಿಯಲ್ಲ. ನಾನು ಅಪಘಾತವನ್ನು 100 ಮೀಟರ್ ಅಂತರದಲ್ಲಿ ನೋಡಿರುತ್ತೇನೆ. ಅಪಘಾತಪಡಿಸಿದ ಟ್ರಾಕ್ಟರ್ ನಂಬರ್ ಕೆಎ-13-ಟಿಬಿ-4019 ಆಗಿರುತ್ತದೆ. ಅರ್ಜಿದಾರರು ಮತ್ತು ನಾನು ದಾಯಾದಿಗಳು ಅಂದರೆ ಸರಿ. ಮೃತ ನಂಜುಂಡೇಗೌಡರವರಿಗೆ ತಲೆಗೆ ಬಲವಾದ ಪೆಟ್ಟಾಗಿತ್ತು. ಅಪಘಾತ ಆದ ಕೂಡಲೇ ನಾನು ಹೋಗಿ ಮೃತ ನಂಜುಂಡೇಗೌಡರವರನ್ನು ನೋಡಿದಾಗ ಅವರು ಸ್ಥಳದಲ್ಲಿಯೆ ಮೃತಪಟ್ಟಿದ್ದರು. ಮೃತ ದೇಹವನ್ನು ಆಟೋದಲ್ಲಿ ಚನ್ನರಾಯಪಟ್ಟಣದ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ, ಅರ್ಜಿದಾರರಿಗೆ ಪರಿಹಾರ ಕೊಡಿಸಲು ನೋಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂಜುಂಡೇಗೌಡರೆ ಟಿ ವಿ ಎಸ್ ವಾಹನವನ್ನು ಆ ದಿನ ಓಡಿಸುತ್ತಿದ್ದರು. ಮೃತ ನಂಜುಂಡೇಗೌಡರವರಿಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೃತ ನಂಜುಂಜಡೇಗೌಡರು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸಿ ಅಪಘಾತಕ್ಕೆ ಕಾರಣರಾಗಿರುತ್ತಾರೆ ಎಂದರೆ ಸುಳ್ಳು.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ತೆ ನ್ಯಾ ನ ಉ ಮೇ ಬೆ ಮಾಡಿಸಲಾಯಿತು.**

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
C/C 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.